**ಸಾಕ್ಷಿಗೆ ದಿನಾಂಕ:05-07-2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

**:: ಮುಂದುವರಿದ ಪಾಟೀ ಸವಾಲು :: ಆರೋಪಿ ಪರ ಶ್ರೀ. ಹೆಚ್.ಇ.ಎಮ್ ವಕೀಲರಿಂದ ::**

4. ಪ್ರಶ್ನಿತ ಚೆಕ್ ಅನ್ನು ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಲ್ಲಿರುವ ಸಾಲದ ಬಾಬ್ತು ಆರೋಪಿತರು ಪ್ರಶ್ನಿತ ಚೆಕ್ ಅನ್ನು ನೀಡಿರುತ್ತಾರೆ. ಸದರಿ ಪ್ರಶ್ನಿತ ಚೆಕ್ ಅನ್ನು ಸದರಿ ಸಂಘದ ಹೆಸರಿಗೆ ನೀಡಿರುತ್ತಾರೆ ಎಂದರೆ ಸರಿ. ನಾನು ವೈಯುಕ್ತಿಕ ನೆಲೆಯಲ್ಲಿ ಈ ಪ್ರಕರಣವನ್ನು ಆರೋಪಿತರ ವಿರುದ್ಧ ಸಲ್ಲಿಸಿರುತ್ತೇನೆ ಎಂದರೆ ಸರಿ.

1.ಪ್ರಶ್ನೆ: ನೀವು ನಿಮ್ಮ ವೈಯುಕ್ತಿಕ ನೆಲೆಯಲ್ಲಿ ಈ ಪ್ರಕರಣವನ್ನು ದಾಖಲಿಸಲು ಸದರಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘ ನಿಮಗೆ ಅನುಮತಿ ನೀಡಿತ್ತೇ ?

ಉತ್ತರ: ಅನುಮತಿ ನೀಡಿದ್ದಾರೆ.

5. ಈ ಪ್ರಕರಣದಲ್ಲಿ ನಾನು ಸದರಿ ಅನುಮತಿ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿರುವುದಿಲ್ಲ. ಆರೋಪಿ ನಮ್ಮ ಸೊಸೈಟಿಯಲ್ಲಿ ಯಾವ ದಿನಾಂಕದಂದು ಸಾಲ ಬೇಕೆಂದು ಅರ್ಜಿ ಸಲ್ಲಿಸಿದ್ದರು ಎಂಬ ವಿಚಾರವನ್ನು ನಮ್ಮ ನೋಟೀಸು ಮತ್ತು ದೂರಿನಲ್ಲಿ ತಿಳಿಸಿರುತ್ತೇನೆ. ಆರೋಪಿಗೆ ಸಾಲವನ್ನು ಚೆಕ್ ಮುಖಾಂತರ ನೀಡಿರುತ್ತೇವೆ, ದಿನಾಂಕ ನೆನಪಿರುವುದಿಲ್ಲ ಎಂದು ನುಡಿಯುತ್ತಾರೆ. ಆರೋಪಿತರು ಸದರಿ ಸಾಲವನ್ನು ಹಳೆಯ ವಾಹನವನ್ನು ಖರೀದಿ ಮಾಡುವ ಸಲುವಾಗಿ ಪಡೆದಿದ್ದರು. ಆರೋಪಿತರು ಈ ಹಿಂದೆ ಸದರಿ ಸೊಸೈಟಿಯಲ್ಲಿ 1 ಲಕ್ಷ ರೂ. ಸಾಲದ ಹಣವನ್ನು ಪಡೆದು ಅದನ್ನು ಮರುಪಾವತಿ ಮಾಡಿರುತ್ತಾರೆ ಎಂದರೆ ಸರಿ. ನಮ್ಮ ಸೊಸೈಟಿಯಲ್ಲಿ ಸಾಲ ನೀಡುವ ಸಂದರ್ಭದಲ್ಲಿ ಭದ್ರತೆಗಾಗಿ ಚೆಕ್ ಅನ್ನು ಪಡೆದುಕೊಳ್ಳುತ್ತೇವೆ ಎಂದರೆ ಸರಿ. ಆರೋಪಿತರು ಈ ಹಿಂದೆ 1 ಲಕ್ಷ ರೂ. ಸಾಲ ಪಡೆದ ಸಂದರ್ಭದಲ್ಲಿ ಭದ್ರತೆಗಾಗಿ ಪಡೆದುಕೊಂಡಿದ್ದ ಚೆಕ್ ಅನ್ನು ಸದರಿ ಸಾಲ ಮರುಪಾವತಿ ಆದ ನಂತರ ಭದ್ರತೆಗಾಗಿ ಪಡೆದುಕೊಂಡಿದ್ದ ಚೆಕ್ ಅನ್ನು ಹಿಂದಿರುಗಿಸಿರುವುದಿಲ್ಲ ಎಂದರೆ ಸರಿಯಲ್ಲ.

6. ನಾವು ಪ್ರಶ್ನಿತ ಚೆಕ್ ಅನ್ನು ಆರೋಪಿತರು ಈ ಹಿಂದೆ ಪಡೆದಿದ್ದ 1 ಲಕ್ಷ ರೂ. ಸಾಲದ ಹಣ ಮರುಪಾವತಿಯಾದ ನಂತರ ಹಿಂದಿರುಗಿಸದೆ, ಪ್ರಶ್ನಿತ ಚೆಕ್ ಅನ್ನು ದುರುಪಯೋಗ ಪಡಿಸಿಕೊಂಡು ನನ್ನ ವೈಯುಕ್ತಿಕ ನೆಲೆಯಲ್ಲಿ ಈ ಸುಳ್ಳು ಪ್ರಕರಣವನ್ನು -

ಆರೋಪಿತರ ವಿರುದ್ಧ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಈ ಹಿಂದೆ ನಮ್ಮ ಸೊಸೈಟಿಯಲ್ಲಿ 1 ಲಕ್ಷ ರೂ. ಸಾಲವನ್ನು ಪಡೆದು ತದ ನಂತರ ಅದನ್ನು ಮರುಪಾವತಿ ಮಾಡಿದ ನಂತರ ಬೇರೆ ಯಾವುದೇ ಸಾಲವನ್ನು ನಮ್ಮ ಸೊಸೈಟಿಯಲ್ಲಿ ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ದಿಃ 19-12-2023 ರಂದು ಪ್ರಶ್ನಿತ ಚೆಕ್ ಅನ್ನು ಸಾಲ ತೀರುವಳಿಗಾಗಿ ನೀಡಿದ್ದಾರೆ ಎಂದು ಸುಳ್ಳು ದೂರನ್ನು ಆರೋಪಿತರ ವಿರುದ್ಧ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಸಾಲವನ್ನು ಪಡೆದುಕೊಳ್ಳದೇ ಇರುವುದರಿಂದ ನನ್ನ ದೂರಿನಲ್ಲಾಗಲೀ, ನೋಟೀಸಿನಲ್ಲಾಗಲೀ ಸದರಿ ಸಾಲ ನೀಡಿದ ದಿನಾಂಕದ ವಿವರಗಳನ್ನು ನಮೂದಿಸಿರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿತರು ಯಾವುದೇ ಸಾಲದ ಹಣವನ್ನು ಮರುಪಾವತಿ ಮಾಡಲು ಬಾಧ್ಯಸ್ಥರಾಗಿಲ್ಲದೇ ಇದ್ದರೂ ಸಹ ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಪ್ರಶ್ನಿತ ಚೆಕ್ ಅನ್ನು ದುರುಪಯೋಗ ಪಡಿಸಿಕೊಂಡು ಆರೋಪಿತರ ವಿರುದ್ಧ ಸುಳ್ಳು ಪ್ರಕರಣವನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**:: ಮರುವಿಚಾರಣೆ ಇಲ್ಲ ::**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಸಹಿ/-

ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,

ಶೃಂಗೇರಿ.